ಅಧ್ಯಯನಾಂಗ

## ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

**ದೂ: ೦೮೩೯೪-೨೪೧೪೬೪, ೨೪೧೩೩೭ ವಿಸ್ತರಣೆ ೩೩೫, ಫ್ಯಾಕ್ಸ್ : ೦೮೩೯೪-೨೪೧೩೩೫**

---

**ಎಂ.ಎ.,ಪಿಎಚ್.ಡಿ. ಸಂಯೋಜಿತ ಪದವಿ**

# ಸೆಮಿಸ್ಟರ್ ಶಿಕ್ಷಣದ ನಿಯಮಾವಳಿಗಳು

### ೧. ಕೋರ್ಸ್‌ಗೆ ಪ್ರವೇಶ

೧.೧. **ಭಾಷಾ ನಿಕಾಯ** ಎಂ.ಎ., ಪಿಎಚ್.ಡಿ. ಸಂಯೋಜಿತ ಪದವಿ ಕೋರ್ಸ್

**ವಿಷಯ :** ಕನ್ನಡ ಸಾಹಿತ್ಯ

### ೨ ಅವಧಿ

೨.೧. ಇಪ್ಪತ್ತು ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶಾವಕಾಶವಿರುತ್ತದೆ. ಇದು ೫ ವರ್ಷಗಳ ಶಿಕ್ಷಣವಾಗಿರುತ್ತದೆ. ೨+೩ ವರ್ಷಗಳು ಅಂದರೆ ೨ ವರ್ಷ. ಎಂ.ಎ. ೩ ವರ್ಷ ಪಿಎಚ್.ಡಿ. ೨ ವರ್ಷ. ಎಂ.ಎ. ಮುಗಿಸಿ ಹೊರಗೆ ಹೋಗಲು ಈ ಕೋರ್ಸ್‌ನಲ್ಲಿ ಅವಕಾಶ ಇರುತ್ತದೆ. ಆದರೆ ಪಿಎಚ್.ಡಿ. ಅಧ್ಯಯನಕ್ಕೆ ನಡುವೆ ಒಳಬರಲು ಅವಕಾಶ ಇರುವುದಿಲ್ಲ. ೧೦ನೇ ಸೆಮಿಸ್ಟರ್ ಮುಗಿದ ಮೇಲೆ ಅವಶ್ಯಕತೆಯಿದ್ದಲ್ಲಿ ಒಂದು ಅವಧಿ(ಆರು ತಿಂಗಳು)ಗೆ ಕುಲಪತಿಗಳ ಅನುಮೋದನೆ ಮೇರೆಗೆ ವಿಸ್ತರಣೆ ಪಡೆಯಬಹುದು.

೨.೨. ಇದರಲ್ಲಿ ಒಟ್ಟು ಹತ್ತು ಸೆಮಿಸ್ಟರ್‌ಗಳಿರುತ್ತವೆ. ೧, ೨, ೩, ೪ ಈ ನಾಲ್ಕುಗಳು ಎಂ.ಎ. ಸೆಮಿಸ್ಟರುಗಳು. ೫, ೬, ೭, ೮, ೯, ೧೦ ಈ ಆರು ಪಿಎಚ್.ಡಿ.ಸೆಮಿಸ್ಟರ್‌ಗಳು. ಇಲ್ಲಿ ಕಡ್ಡಾಯ ಪತ್ರಿಕೆ, ಐಚ್ಛಿಕ ಪತ್ರಿಕೆಗಳು ಮತ್ತು ವಿದ್ಯಾರ್ಥಿ ಆಯ್ದುಕೊಂಡ ಆ ಐಚ್ಛಿಕ ಪತ್ರಿಕೆಗಳಲ್ಲಿ ನಿರ್ದಿಷ್ಟಗೊಳಿಸಿದ ಕ್ಷೇತ್ರದ ಬಗ್ಗೆ ಪಿಎಚ್.ಡಿ. ಬರವಣಿಗೆ ಸೇರಿರುತ್ತದೆ. ಪಿಎಚ್.ಡಿ. ಅಧ್ಯಯನ ಪ್ರಬಂಧವನ್ನು ರಚಿಸಿ ವಿಶ್ವವಿದ್ಯಾಲಯಕ್ಕೆ ನಿಗದಿತ ಪ್ರತಿಗಳನ್ನು ಸಲ್ಲಿಸುವುದು ವಿದ್ಯಾರ್ಥಿಗಳ ಹೊಣೆಯಾಗಿರುತ್ತದೆ.

೨.೩. ಪ್ರವೇಶ ಪರೀಕ್ಷೆಯಿಂದ ಹಿಡಿದು ಸೆಮಿಸ್ಟರ್ ಪರೀಕ್ಷೆಯವರಗೆ ಪ್ರತಿ ಸೆಮಿಸ್ಟರ್‌ನ (೧ ರಿಂದ ೪) ಬೋಧನೆಯ ಅವಧಿ ೧೮ ವಾರಗಳು.

### ೩. ವಿದ್ಯಾರ್ಹತೆ

ಪ್ರವೇಶ ಪರೀಕ್ಷೆ ಕಡ್ಡಾಯವಾಗಿರುತ್ತದೆ. ಇದು ಲಿಖಿತ (೮೦ ಅಂಕಗಳು) ಹಾಗೂ ಮೌಖಿಕ (೨೦ ಅಂಕಗಳು) ರೂಪದಲ್ಲಿರುತ್ತದೆ. ಪ್ರವೇಶ ಪರೀಕ್ಷೆಯಿಂದ ಬರುವ ಅಂಕಗಳ ಶೇ. ೫೦ ಹಾಗೂ ಪದವಿ ತರಗತಿಗಳಲ್ಲಿ ಪಡೆದ ಅಂಕಗಳು ಶೇ. ೫೦ರ ಸರಾಸರಿಯನ್ನು ಪರಿಗಣಿಸುವುದು.

೩.೧. ವಿದ್ಯಾರ್ಥಿಯು ಯಾವುದೇ ವಿಶ್ವವಿದ್ಯಾಲಯದಿಂದ ಯಾವುದೇ ಪದವಿ ಪಡೆದಿರಬೇಕು.

೩.೨. ಪದವಿ ತರಗತಿಗಳಲ್ಲಿ ಕನ್ನಡವನ್ನು ಐಚ್ಛಿಕ ವಿಷಯವನ್ನಾಗಿ ಓದಿ ಸರಾಸರಿ ಶೇ.೫೫ ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರಬೇಕು. ಅಥವಾ

೩.೨. ಯಾವುದೇ ಪದವಿ ತರಗತಿಗಳಲ್ಲಿ ಕನ್ನಡವನ್ನು ದ್ವಿತೀಯ ಭಾಷೆಯನ್ನಾಗಿ ಓದಿ ಆ ವಿಷಯದಲ್ಲಿ ಸರಾಸರಿ ಶೇ.೫೦ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರಬೇಕು.

೩.೩. ಪ.ಜಾ/ಪ.ಪಂ ಹಾಗೂ ಪ್ರವರ್ಗ-೧ರ ವಿದ್ಯಾರ್ಥಿಗಳು ಶೇ.೫೦% ಸರಾಸರಿ ಅಂಕಗಳನ್ನು ಪಡೆದಿರಬೇಕು.

## ೪. ಅಧ್ಯಯನ ವಿಧಾನ

೫.೧. ಪಠ್ಯ, ಪರಾಮರ್ಶನ ಗ್ರಂಥ, ಬೋಧನಾ ವಿಧಾನ ಮತ್ತು ಆಂತರಿಕ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಅಧ್ಯಾಪಕರಿಗೆ ಸಾಕಷ್ಟು ಸ್ವಾತಂತ್ರ್ಯವಿರಬೇಕು.

೫.೨. ವಿದ್ಯಾರ್ಥಿಗಳು ನಿರ್ದಿಷ್ಟ ಪಠ್ಯಗಳನ್ನು ಓದುವಂತೆಯೇ ಒಟ್ಟು ಅಧ್ಯಯನ ವಿಷಯಕ್ಕೆ ಸಂಬಂಧಿಸಿದ ಪರಾಮರ್ಶನ ಗ್ರಂಥಗಳನ್ನು ಗ್ರಹಿಸುವುದು ಅನಿವಾರ್ಯ. ಅವುಗಳಿಗೆ ಪೂರಕವಾಗಿಯೇ ಪರೀಕ್ಷೆಗಳೂ ಸಹ ರೂಪಿತವಾಗಿರುತ್ತವೆ.

೫.೩. ಮೂರನೆಯ ಸೆಮಿಸ್ಟರ್‌ನಲ್ಲಿಯೇ ಬರುವ ಐಚ್ಛಿಕ ಪತ್ರಿಕೆಗಳಲ್ಲಿ ಮುಂದೆ ಪಿಎಚ್.ಡಿ. ಅಧ್ಯಯನಕ್ಕೆ ಆಯ್ದುಕೊಳ್ಳುವ ಕ್ಷೇತ್ರಕ್ಕೆ ಸಂಬಂಧಿಸಿದ ಪತ್ರಿಕೆಯನ್ನು ವಿದ್ಯಾರ್ಥಿಗಳು ಆರಿಸಿಕೊಂಡು ಅಧ್ಯಯನಕ್ಕೆ ತೊಡಗಬೇಕು.

೫.೪. ವಿದ್ಯಾರ್ಥಿಗಳು ಮೂರನೆಯ ಸೆಮಿಸ್ಟರ್‌ನಲ್ಲಿ ಆಯ್ದುಕೊಂಡ (ಐಚ್ಛಿಕ ಪತ್ರಿಕೆಗಳ) ತಮ್ಮ ಆಸಕ್ತಿ ಪತ್ರಿಕೆಯಲ್ಲಿ ಪ್ರಬಂಧವನ್ನು ಸಿದ್ಧಪಡಿಸಬೇಕಾಗುತ್ತದೆ. ವಿದ್ಯಾರ್ಥಿಗಳು ನಾಲ್ಕನೇ ಸೆಮಿಸ್ಟರ್‌ನಲ್ಲಿ ತಾವು ಮುಂದೆ ಪಿಎಚ್.ಡಿ.ಗೆ ಆಯ್ಕೆ ಮಾಡುವ ತಮ್ಮ ಆಸಕ್ತಿಯ ಕ್ಷೇತ್ರಕ್ಕೆ ಪೂರಕವಾದ ಅಧ್ಯಯನ ಇದಾಗಿರಬೇಕು.

೫.೫. ವಿದ್ಯಾರ್ಥಿಗಳು ೫ನೇ ಸೆಮಿಸ್ಟರ್‌ನಲ್ಲಿಯೇ ತಮ್ಮ ಸಂಶೋಧನ ವಿಷಯವನ್ನು ಆಯ್ಕೆ ಮಾಡಿಕೊಳ್ಳಬೇಕು. ೫ನೇ ಸೆಮಿಸ್ಟರ್‌ಗೆ ಪ್ರವೇಶ ಪಡೆಯುವಾಗ ಪ್ರವೇಶ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿ ಕಡ್ಡಾಯವಾಗಿ ಭಾಗವಹಿಸಬೇಕು. ವಿದ್ಯಾರ್ಥಿಗಳು ಸಂಶೋಧನ ವಿಧಿ ವಿಧಾನಗಳ ಬಗ್ಗೆ ಇಲ್ಲಿ ತೀವ್ರ ಆಸಕ್ತಿವಹಿಸಬೇಕು. ವಿಷಯದ ಆಯ್ಕೆ ಆಯಾ ವಿಭಾಗದ ಅಧ್ಯಯನ ಶಿಸ್ತಿಗೆ ಅನುಗುಣವಾಗಿ ಇರುವುದು ಅಗತ್ಯ. ೫, ೬, ೭, ೮, ೯ ಹಾಗೂ ೧೦ನೇ ಸೆಮಿಸ್ಟರ್‌ಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾದ ನಿಯಮಾವಳಿಗಳೇ ಇರುತ್ತವೆ.

೫.೬. ದಿನಕ್ಕೆ ೪ ಗಂಟೆಯಂತೆ ಒಟ್ಟಾರೆ ಪ್ರತಿ ಪತ್ರಿಕೆಗೆ ಸುಮಾರು ೫೦ ರಿಂದ ೬೦ ಗಂಟೆ ಬೋಧನೆ ಇರಬೇಕು. ಅಧ್ಯಾಪಕರ ಬೋಧನೆ, ವಿದ್ಯಾರ್ಥಿಯ ಆಂತರಿಕ ಸಿದ್ಧತೆಯ ಪ್ರಬಂಧ, ಟಿಪ್ಪಣಿ ಮಂಡನೆ, ಓದು, ಗುಂಪು ಚರ್ಚೆ ಇತ್ಯಾದಿಗಳು ಇರಬೇಕು.

## ೫. ಪರೀಕ್ಷಾ ವಿಧಾನ

೬.೧. ಪ್ರತಿ ಸಿದ್ಧಾಂತ ಪತ್ರಿಕೆಯ ಪ್ರಶ್ನೆ ಪತ್ರಿಕೆಯು 'ಅ' ಮತ್ತು 'ಬ' ವಿಭಾಗ ಎಂದು ಎರಡು ವಿಭಾಗಗಳನ್ನು ಹೊಂದಿರುತ್ತದೆ. 'ಅ' ವಿಭಾಗದಲ್ಲಿ ಪ್ರಬಂಧ ಮಾದರಿಯಲ್ಲಿ ಉತ್ತರ ಬರೆಯಬೇಕಾದ ೬ ಪ್ರಶ್ನೆಗಳಿರುತ್ತವೆ. ಅದರಲ್ಲಿ ೪ ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ಉತ್ತರಿಸಬೇಕು. ಪ್ರತಿಪ್ರಶ್ನೆಗೆ ೧೦ ಅಂಕಗಳಂತೆ ಒಟ್ಟು ೪೦ ಅಂಕಗಳಿಗೆ ಉತ್ತರಿಸಬೇಕು. ವಿಭಾಗದಲ್ಲಿ ಟಿಪ್ಪಣಿ ರೂಪದ ೬ ಪ್ರಶ್ನೆಗಳಿರುತ್ತವೆ. ಅವುಗಳಲ್ಲಿ ಟಿಪ್ಪಣಿ ರೂಪದ ೪ ಪ್ರಶ್ನೆಗಳಿಗೆ ಉತ್ತರ ಬರೆಯಬೇಕು. ಪ್ರತಿ ಟಿಪ್ಪಣಿಗೆ ೫ ಅಂಕಗಳಂತೆ ಒಟ್ಟು ೨೦ ಅಂಕಗಳಿಗೆ ಉತ್ತರಿಸಬೇಕು. ಇಡೀ ಪತ್ರಿಕೆಯ ಪಠ್ಯಕ್ರಮವನ್ನು ಒಳಗೊಂಡಂತೆಯೇ ಪ್ರಶ್ನೆಪತ್ರಿಕೆಯನ್ನು ರೂಪಿಸಬೇಕು.

೬.೨. ಪ್ರತಿಸೆಮಿಸ್ಟರ್‌ನಲ್ಲಿಯೂ ಐದು ಪತ್ರಿಕೆಗಳಿರುತ್ತವೆ. ಪ್ರತಿ ಪತ್ರಿಕೆಗೆ ೧೦೦ ಅಂಕಗಳು. ಅಂದರೆ ಕ್ರಮವಾಗಿ ಸಿದ್ಧಾಂತ ಪತ್ರಿಕೆಗೆ ೬೦ ಮತ್ತು ಆಂತರಿಕ ಮೌಲ್ಯಮಾಪನಕ್ಕೆ ೪೦ ಅಂಕಗಳು.

೬.೩. ಮೊದಲ ಸೆಮಿಸ್ಟರ್ ಎಲ್ಲಾ ಪತ್ರಿಕೆಗಳಲ್ಲಿ ತೇರ್ಗಡೆಯಾಗದ ಹೊರತು ವಿದ್ಯಾರ್ಥಿಗಳು ನಾಲ್ಕನೆಯ ಸೆಮಿಸ್ಟರ್‌ಗೆ ಪ್ರವೇಶ ಇರುವುದಿಲ್ಲ.

೬.೪. ಯಾವುದೇ ಪತ್ರಿಕೆಯಲ್ಲಿ ಅಂಕಗಳನ್ನು ಮತ್ತೆ ಉತ್ತಮಗೊಳಿಸಿಕೊಳ್ಳಲು ಅವಕಾಶವಿರುತ್ತದೆ. ಆದರೆ ಮರುಪರೀಕ್ಷೆ ತೆಗೆದುಕೊಂಡ ವಿದ್ಯಾರ್ಥಿಗಳು ಪಡೆಯುವ ಅಂಕಗಳು ಆ ಮೊದಲು ಪಡೆದಿದ್ದ ಅಂಕಗಳಿಗಿಂತ ಮತ್ತೆ ಕಡಿಮೆ ಬಂದರೆ ಮೊದಲಿದ್ದ ಅಂಕಗಳೇ ಮುಂದುವರಿಯುತ್ತವೆ. ಮರುಪರೀಕ್ಷೆ ತೆಗೆದುಕೊಂಡವರು ಆಯಾ ಸೆಮಿಸ್ಟರ್ ಪರೀಕ್ಷೆಗಳು ಬಂದಾಗಲೇ ಪರೀಕ್ಷೆಗೆ ಹಾಜರಾಗಬೇಕು.

೬.೫. ವಿದ್ಯಾರ್ಥಿಗಳು ಯಾವುದೇ ಪತ್ರಿಕೆಯಲ್ಲಿ ಶೇ. ೫೫ಕ್ಕಿಂತ ಕಡಿಮೆ ಅಂಕಗಳನ್ನು ಪಡೆದಾಗ ಆ ವಿಷಯದಲ್ಲಿ ಅನುತ್ತೀರ್ಣರಾಗುತ್ತಾರೆ.

೬.೬. ಅಂತಿಮವಾಗಿ ಶೇ. ೫೫ ರಿಂದ ಶೇ. ೫೯ ಅಂಕಗಳು ಬಂದರೆ ದ್ವಿತೀಯ ದರ್ಜೆ, ಶೇ. ೬೦ ರಿಂದ ಶೇ. ೭೪ ಬಂದರೆ ಪ್ರಥಮ ದರ್ಜೆ, ಶೇ.೭೫ರ ಮೇಲೆ ಬಂದರೆ ಶ್ರೇಣಿ ಎಂದು, ಶೇ.೫೫ಕ್ಕಿಂತ ಕಡಿಮೆ ಬಂದರೆ ಅನುತ್ತೀರ್ಣ ಎಂದು ಘೋಷಿಸಬೇಕು.

## ೬. ಪರೀಕ್ಷಾ ಅಧ್ಯಯನ ಮಂಡಳಿ ಮತ್ತು ಮೌಲ್ಯಮಾಪನ (Board of Examiners Valuation)

೭.೧. ಪರೀಕ್ಷಾ ಅಧ್ಯಯನ ಮಂಡಲಿಯು ಪ್ರಶ್ನೆ ಪತ್ರಿಕೆಗಳನ್ನು ಪರಿಶೀಲಿಸಿ ಒಪ್ಪಿಗೆ ಕೊಡಬೇಕು.

೭.೨. ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸಲು ಮತ್ತು ಮೌಲ್ಯಮಾಪನ ಮಾಡಲು ಪ್ರತಿಸೆಮಿಸ್ಟರ್‌ನಲ್ಲಿಯೂ ಸುಮಾರು ಶೇ.೫೦ರಷ್ಟು ಬಾಹ್ಯ ಮೌಲ್ಯಮಾಪಕರನ್ನು ನೇಮಿಸಬೇಕು.

೭.೩. ಉತ್ತರ ಪತ್ರಿಕೆಗಳನ್ನು ಒಳಗಿನ ಮತ್ತು ಹೊರಗಿನ ಇಬ್ಬರು ಮೌಲ್ಯಮಾಪಕರು ಮೌಲ್ಯಮಾಪನ ಮಾಡಬೇಕು.

೭.೪. ಯಾವುದೇ ಸಿದ್ಧಾಂತ ಪತ್ರಿಕೆಯಲ್ಲಿ ಆಂತರಿಕ ಮತ್ತು ಬಾಹ್ಯ ಮೌಲ್ಯಮಾಪನದ ಕ್ರಮ ವ್ಯತ್ಯಾಸವಾಗಿ ೧೨ ಅಥವಾ ೧೨ ಅಂಕಗಳಿಗಿಂತ ಹೆಚ್ಚು ಬಂದಿದ್ದರೆ ಮೂರನೇ ಮೌಲ್ಯಮಾಪಕರಿಂದ ಮೌಲ್ಯಮಾಪನ ಮಾಡಿಸಬೇಕು. ಈ ಮೌಲ್ಯಮಾಪನವೇ ಅಂತಿಮವಾಗಿರುತ್ತದೆ.

೭.೫. ವಿದ್ಯಾರ್ಥಿಗಳು ಯಾವುದೇ ಪತ್ರಿಕೆಯಲ್ಲಿ ಮರುಪರೀಕ್ಷೆಗೆ (ಮೇಲಿನ ೬.೪ರನ್ವಯ) ಹಾಜರಾಗಲು ಬಯಸಿದರೆ ಅವರು ಫಲಿತಾಂಶ ಬಂದ ೩೦ ದಿನಗಳೊಳಗೆ ವಿಶ್ವವಿದ್ಯಾಲಯದಿಂದ ಅನುಮತಿ ಪಡೆಯಬೇಕು. ವಿದ್ಯಾರ್ಥಿಗಳು ಹೀಗೆ ಮರುಪರೀಕ್ಷೆ ಬಯಸಿದಾಗ ತಮ್ಮ ಮೂಲ ಅಂಕಪಟ್ಟಿಗಳನ್ನು ವಿಶ್ವವಿದ್ಯಾಲಯಕ್ಕೆ ಒಪ್ಪಿಸಬೇಕು.

## ೭. ಆಂತರಿಕ ಮೌಲ್ಯಮಾಪನ (Internal Assessment)

೭.೧. ಸೆಮಿಸ್ಟರ್ ಕೊನೆಯಲ್ಲಿ ನಡೆಸುವ ಪರೀಕ್ಷೆಗಳಷ್ಟೇ ಮಹತ್ವ, ಬೋಧನೆಯ ಅವಧಿಯಲ್ಲಿ ಅಧ್ಯಾಪಕರು ನಡೆಸುವ ಆಂತರಿಕ ಮೌಲ್ಯಮಾಪನಕ್ಕೂ ಇರುತ್ತದೆ. ಈ ಇನ್ ಕೋರ್ಸ್ ಮೌಲ್ಯಮಾಪನಕ್ಕೆ ಪ್ರತಿ ಪತ್ರಿಕೆಗೂ ೪೦ ಅಂಕಗಳು ಇರುತ್ತವೆ.

೭.೨. ವಿದ್ಯಾರ್ಥಿಯು ಪ್ರತಿ ಪತ್ರಿಕೆಯಲ್ಲಿಯೂ ಆಂತರಿಕ ಮೌಲ್ಯಮಾಪನಕ್ಕಾಗಿ ಗೃಹ ಲೇಖನ, ಪ್ರಬಂಧ ರಚಿಸುವುದು, ತರಗತಿಯಲ್ಲಿ ವಿಚಾರ ಸಂಕಿರಣ, ಚರ್ಚೆಯಲ್ಲಿ ಭಾಗವಹಿಸುವುದು ಕಡ್ಡಾಯ. ಪ್ರತಿ ಪತ್ರಿಕೆಗೂ ವಿದ್ಯಾರ್ಥಿಯು ಎರಡು ನಿಯೋಜಿತ ಪ್ರಬಂಧಗಳನ್ನು (ಅಸೈನ್‌ಮೆಂಟ್) ಆಂತರಿಕ ಮೌಲ್ಯಮಾಪನಕ್ಕಾಗಿ ಸಿದ್ಧಪಡಿಸಿ ಒಪ್ಪಿಸಬೇಕು. ಎರಡೂ ಪತ್ರಿಕೆಗಳನ್ನು ತಲಾ ೧೫ ಅಂಕಗಳಂತೆ ಮೌಲ್ಯಮಾಪನ ಮಾಡಲಾಗುವುದು. ಮೌಖಿಕ ಪರೀಕ್ಷೆಗೆ ೧೦ ಅಂಕಗಳು ಇರುತ್ತವೆ. ಇವೆರಡರಿಂದ ಒಟ್ಟು ೪೦ ಅಂಕಗಳಿಗೆ ಸರಾಸರಿ ಶೇ.೫೦ರಷ್ಟು ಅಂಕಗಳನ್ನು ಕಡ್ಡಾಯವಾಗಿ ಪಡೆಯಬೇಕು.

೭.೩. ಪ್ರತಿ ಉತ್ತರ ಪತ್ರಿಕೆಗಳಲ್ಲಿಯೂ ವಿದ್ಯಾರ್ಥಿಯು ೬೦ ಅಂಕಗಳಿಗೆ ಕನಿಷ್ಠ ಶೇ.೫೦ರಷ್ಟು ಅಂಕಗಳನ್ನು ಪಡೆಯಬೇಕು. ಉತ್ತರ ಪತ್ರಿಕೆ ಮತ್ತು ಅದಕ್ಕೆ ಸಂಬಂಧಿಸಿದ ಆಂತರಿಕ ಮೌಲ್ಯಮಾಪನದ ಪತ್ರಿಕೆ ಎರಡನ್ನೂ ಕೂಡಿಸಿದಾಗ ಆ ಪತ್ರಿಕೆಯಲ್ಲಿ ಸರಾಸರಿ ಶೇ.೫೫ ಅಂಕಗಳು ಬರಲೇಬೇಕು.

೭.೪. ವಿದ್ಯಾರ್ಥಿಯು ತನ್ನ ಪ್ರಬಂಧಗಳನ್ನು ಕೊನೆಯ ಕೆಲಸದ ದಿನಕ್ಕೆ ಮೂರು ವಾರಗಳ ಮುಂಚೆ ಸಲ್ಲಿಸಬೇಕು.

೭.೫. ಸಂಬಂಧಿಸಿದ ಪತ್ರಿಕೆಯ ಸಂಚಾಲಕರು ವಿದ್ಯಾರ್ಥಿಗಳ ಆಂತರಿಕ ಮೌಲ್ಯಮಾಪನದ ಅಂಕಗಳನ್ನು ಸೆಮಿಸ್ಟರ್ ಪರೀಕ್ಷೆ ಆರಂಭವಾಗುವುದಕ್ಕೆ ಒಂದುವಾರ ಮುಂಚೆ ಕೋರ್ಸಿನ ಸಂಚಾಲಕರಿಗೆ ಸಲ್ಲಿಸಬೇಕು.

೭.೬. ವಿದ್ಯಾರ್ಥಿಗಳ ಎಲ್ಲ ಸಂಪ್ರಬಂಧಗಳನ್ನು ಮೌಲ್ಯಮಾಪನ ಮಾಡಿ ವಿಭಾಗಗಳ ಸೂಚನಫಲಕದಲ್ಲಿ ಪ್ರಕಟಿಸಬೇಕು.

## ೮. ಮಾಧ್ಯಮ

೮.೧. ವಿದ್ಯಾರ್ಥಿಗಳು ಕನ್ನಡದಲ್ಲಿಯೇ ಪರೀಕ್ಷೆಗಳನ್ನು ಬರೆಯಬೇಕು.

## ೯. ಹಾಜರಾತಿ

೯.೧. ಪ್ರತಿ ಸೆಮಿಸ್ಟರ್‌ನಲ್ಲಿಯೂ ವಿದ್ಯಾರ್ಥಿಗಳ ಹಾಜರಾತಿ ಶೇ.೭೫ರಷ್ಟು ಇರಬೇಕು.

೯.೨. ಪ್ರತಿ ಸೆಮಿಸ್ಟರ್‌ನಲ್ಲಿಯೂ ಶೇ.೭೫ಕ್ಕಿಂತಲೂ ಕಡಿಮೆ ಹಾಜರಾತಿ ಹೊಂದಿದ್ದು, ಗರಿಷ್ಠ ಶೇ.೧೫ರವರೆಗೆ ವಿದ್ಯಾರ್ಥಿಗಳು ಕೊರತೆ ಹಾಜರಾತಿ ಹೊಂದಿದ್ದರೆ ಕೋರ್ಸಿನ ಸಂಚಾಲಕರ ಶಿಫಾರಸಿನ ಮೇರೆಗೆ ವಿಶ್ವವಿದ್ಯಾಲಯದ ಅನುಮತಿ ಪಡೆದು ಕೊರತೆ ಹಾಜರಾತಿ ಶುಲ್ಕವನ್ನು ವಿಶ್ವವಿದ್ಯಾಲಯಕ್ಕೆ ಪಾವತಿಸಬೇಕು.

೯.೩. ಅವಶ್ಯಕವಾದ ಮತ್ತು ತೃಪ್ತಿಕರವಾದ ಹಾಜರಾತಿ ಇಲ್ಲದಿದ್ದರೆ ವಿದ್ಯಾರ್ಥಿಯು ಸಂಬಂಧಿಸಿದ ಸೆಮಿಸ್ಟರ್ ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹರಾಗಿರುವುದಿಲ್ಲ. ವಿದ್ಯಾರ್ಥಿಯು ಅವಶ್ಯಕವಾದ ಹಾಜರಾತಿಯನ್ನು ಸಂಬಂಧಿಸಿದ ಸೆಮಿಸ್ಟರ್‌ನಲ್ಲಿ ಹೊಂದಿಲ್ಲದಿದ್ದರೆ ಅವರು ಮತ್ತೆ ಹೊಸದಾಗಿ ಆ ಸೆಮಿಸ್ಟರ್ ಕೋರ್ಸ್‌ಗೆ ಮರುಪ್ರವೇಶ ಪಡೆಯಬೇಕು. ಆಗಲೂ ಗೈರು ಹಾಜರಾತಿಗೆ ಸಂಬಂಧಿಸಿದಂತೆ ಅಧಿಕೃತ ದಾಖಲೆಗಳನ್ನು ಸಲ್ಲಿಸುವುದು ಕಡ್ಡಾಯ.

೯.೩. ವಿಶೇಷ ರಜೆ ಅಗತ್ಯತೆಗಳಿಗೆ ಅನುಗುಣವಾಗಿ ಮೇಲಿನ ಪ್ರಾಧಿಕಾರದ ಅಪೂರ್ವಾನುಮತಿ ಕಡ್ಡಾಯ. ನಂತರದಲ್ಲಿ ಹಾಗೂ ಪೂರಕವಾಗಿ ಅಧಿಕೃತ ದಾಖಲೆಗಳನ್ನು ಒದಗಿಸಬೇಕು.

## ೧೦. ಶಿಕ್ಷಣ ಶುಲ್ಕ

೧೦.೧. ಅರ್ಜಿ ಮತ್ತು ನಿಯಮಾವಳಿಗಾಗಿ ರೂ. ೧೦೦/-

೧೦.೨. ನೋಂದಣಿ ಶುಲ್ಕ ಅಧ್ಯಯನ ಶುಲ್ಕ, ಪರೀಕ್ಷಾ ಶುಲ್ಕಗಳನ್ನು ವಿಶ್ವವಿದ್ಯಾಲಯವು ನಿಯಮಾನುಸಾರ ನಿಗದಿ ಮಾಡುವುದು.

## ೧೧. ಶೈಕ್ಷಣಿಕ ಬೋಧನಾ ಸಮಿತಿ

ಈ ಸಮಿತಿಯಲ್ಲಿ ಕೆಳಕಂಡ ಸದಸ್ಯರು ಇರುತ್ತಾರೆ.

| | |
|---|---|
| ೧. ಡೀನ್, ಭಾಷಾ ನಿಕಾಯ | ಅಧ್ಯಕ್ಷರು |
| ೨. ನಿರ್ದೇಶಕರು, ಅಧ್ಯಯನಾಂಗ | ಸದಸ್ಯರು |
| ೩. ಭಾಷಾ ನಿಕಾಯದ ಎಲ್ಲ ವಿಭಾಗಗಳ ಮುಖ್ಯಸ್ಥರು | ಸದಸ್ಯರು |
| ೪. ಎಂ.ಎ.ಪಿಎಚ್.ಡಿ ಕೋರ್ಸ್ ಸಂಚಾಲಕರು | ಸದಸ್ಯ ಸಂಚಾಲಕರು |

**ಸಮಿತಿಯ ಕೆಲಸ ಕಾರ್ಯಗಳು**

೧. ಪ್ರವೇಶ ಪರೀಕ್ಷೆಯ ಪ್ರಕ್ರಿಯೆಯಗಳನ್ನು ನಡೆಸುವುದು.

೨. ಬೋಧನಾ ಪ್ರಕ್ರಿಯೆಗಳನ್ನು ನಡೆಸಲು ಮಾರ್ಗದರ್ಶನ ಮಾಡುವುದು.

೩. ಕೋರ್ಸ್‌ನ ಸಂಚಾಲಕರು ಪ್ರತಿಯೊಂದು ಕೋರ್ಸ್‌ನ ಸಂಚಾಲಕರಾಗಿರುತ್ತಾರೆ. ನಿಕಾಯದ ಡೀನ್‌ರು ಅಧ್ಯಕ್ಷರಾಗಿರುತ್ತಾರೆ. ಡೀನ್ ಇಲ್ಲದ ಪಕ್ಷದಲ್ಲಿ ಅಧ್ಯಯನಾಂಗದ ನಿರ್ದೇಶಕರು ಅಧ್ಯಕ್ಷರಾಗಿರುತ್ತಾರೆ.

ಅಧ್ಯಯನಾಂಗ

**ಕನ್ನಡ ವಿಶ್ವವಿದ್ಯಾಲಯ, ಹಂಪಿ**

ವಿದ್ಯಾರಣ್ಯ ೫೮೩ ೨೭೬, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

**ದೂ: ೦೮೩೯೪-೨೪೧೪೬೪, ೨೪೧೩೩೭ ವಿಸ್ತರಣೆ ೩೩೫, ಫ್ಯಾಕ್ಸ್ : ೦೮೩೯೪-೨೪೧೩೩೫**

---

# ಎಂ.ಎ.,ಪಿಎಚ್.ಡಿ. ಸಂಯೋಜಿತ ಪದವಿ ಕನ್ನಡ ಸಾಹಿತ್ಯ ೫, ೬, ೭, ೮, ೯ ಮತ್ತು ೧೦ನೇ ಸೆಮಿಸ್ಟರ್‌ಗಳ ನಿಯಮಾವಳಿ

## ೧. ಐದನೆಯ ಸೆಮಿಸ್ಟರ್‌ಗೆ ಪ್ರವೇಶ:

೧. ಪ್ರವೇಶ ಪರೀಕ್ಷೆಯ ಪ್ರಕ್ರಿಯೆಯ ಮೂಲಕ ಐದನೆಯ ಸೆಮಿಸ್ಟರ್‌ಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಬೇಕು. ಇಲ್ಲಿ ನಾಲ್ಕು ಸೆಮಿಸ್ಟರ್‌ಗಳನ್ನು ಪೂರ್ಣವಾಗಿ ಮುಗಿಸಿದ ವಿದ್ಯಾರ್ಥಿಗಳಿಗೆ ಒಮ್ಮೆ ಪ್ರವೇಶ ಪ್ರಕ್ರಿಯೆಗೆ ಅವಕಾಶವಿರುತ್ತದೆ.

೨. ನಾಲ್ಕು ಸೆಮಿಸ್ಟರ್‌ಗಳ ಒಟ್ಟು ಅಂಕಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಒಟ್ಟಾರೆ ಎಲ್ಲ ವಿಷಯಗಳಿಂದ ಶೇ.೫೫ ಅಂಕಗಳನ್ನು ಪ್ರವೇಶ ಪ್ರಕ್ರಿಯೆಗೆ ಹಾಜರಾಗಲು ವಿದ್ಯಾರ್ಥಿ ಅವಶ್ಯವಾಗಿ ಪಡೆದುಕೊಂಡಿರಬೇಕು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಶೇ.೫೦ ಅಂಕಗಳು ಅಗತ್ಯವಾಗಿರುತ್ತವೆ.

೩. ಪ್ರವೇಶ ಪರೀಕ್ಷೆಯಲ್ಲಿ ೪೦ ಅಂಕಗಳು ಸಾಮಾನ್ಯ ವಿಷಯಗಳ ಪ್ರಶ್ನೆಗಳಿಗೂ ಮತ್ತು ೪೦ ಅಂಕಗಳು ಐಚ್ಛಿಕ ವಿಷಯದ ಪ್ರಶ್ನೆಗಳಿಗೂ ಮೀಸಲಾಗಿರಬೇಕು. ಉಳಿದ ೨೦ ಅಂಕಗಳು ಮೌಖಿಕ ಪರೀಕ್ಷೆಗೆ ಮೀಸಲಾಗಿರುತ್ತವೆ.

೪. ಪ್ರತಿಯೊಬ್ಬ ವಿದ್ಯಾರ್ಥಿಯು ತಾನು ಮೂರು ಮತ್ತು ನಾಲ್ಕನೆಯ ಸೆಮಿಸ್ಟರ್‌ನಲ್ಲಿ ಆರಿಸಿಕೊಂಡು ಅಧ್ಯಯನ ಮಾಡಿರುವ ಮೂರು ಐಚ್ಛಿಕ ವಿಷಯಗಳಲ್ಲಿಯೇ ಯಾವುದಾದರೂ ಒಂದು ವಿಷಯವನ್ನು ಸಂಶೋಧನ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಬೇಕು.

೫. ಈಗಿನ ನಿಯಮಾನುಸಾರ ವಿಷಯಗಳು ಆರು. ಅವು ಹೀಗಿವೆ;

   ೧. ಭಾಷಾಧ್ಯಯನ – ೧ ಮತ್ತು ೨

   ೨. ಭಾಷಾಂತರ ಅಧ್ಯಯನ – ೧ ಮತ್ತು ೨

   ೩. ದ್ರಾವಿಡ ಅಧ್ಯಯನ – ೧ ಮತ್ತು ೨

   ೪. ಮಹಿಳಾ ಅಧ್ಯಯನ – ೧ ಮತ್ತು ೨

   ೫. ಆಕರಶಾಸ್ತ್ರ – ೧ ಮತ್ತು ೨

   ೬. ಸಾಹಿತ್ಯಾಧ್ಯಯನ – ೧ ಮತ್ತು ೨

ವಿದ್ಯಾರ್ಥಿಯು ತಾನು ಅಧ್ಯಯನ ಮಾಡಿರುವ ಯಾವುದಾದರೂ ಎರಡು ಐಚ್ಛಿಕ ವಿಷಯಗಳಲ್ಲಿ ಪ್ರವೇಶ ಪ್ರಕ್ರಿಯೆಯಲ್ಲಿ ಭಾಗವಹಿಸುವುದು.

**೨. ಪ್ರವೇಶ ಪರೀಕ್ಷೆಯ ಅನಂತರದಲ್ಲಿ ವಿದ್ಯಾರ್ಥಿ ಅನುಸರಿಸಬೇಕಾದ ನಿಯಮಗಳು:**

೧. ಪ್ರತಿಯೊಬ್ಬ ವಿದ್ಯಾರ್ಥಿಯು ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯಾದ ನಂತರ ನಿರ್ದಿಷ್ಟ ಸಂಶೋಧನ ಕ್ಷೇತ್ರವನ್ನು ಆರಿಸಿಕೊಂಡು ಸಂಬಂಧಿಸಿದ ವಿಭಾಗದಲ್ಲಿ ತಾತ್ಕಾಲಿಕ ನೋಂದಣಿ ಮಾಡಿಸಿಕೊಳ್ಳಬೇಕು. ಭಾಷಾ ನಿಕಾಯದ ಆಯ್ಕೆ ಮಾಡಿಕೊಂಡ ವಿಭಾಗದ ಮಾರ್ಗದರ್ಶಕರ ಅಡಿಯಲ್ಲಿ ಸಂಶೋಧನ ಅಧ್ಯಯನ ಮಾಡಲು ವಿದ್ಯಾರ್ಥಿಗೆ ಅವಕಾಶವಿರುತ್ತದೆ.

೨. ೫ನೆಯ ಸೆಮಿಸ್ಟರ್‌ಗೆ ಪ್ರವೇಶ ಪಡೆದ ಮೇಲೆ ವಿದ್ಯಾರ್ಥಿಗಳು ಈ ಕೆಳಕಂಡ ವಿಷಯಗಳಲ್ಲಿ ಅಧ್ಯಯನವನ್ನು ಕೈಗೊಳ್ಳಬೇಕು.

ಅ. ಸಂಶೋಧನ ವಿಧಿ–ವಿಧಾನಗಳು (ಇದು ಬೋಧನೆಯ ವಿಯಷವಾಗಿರುತ್ತದೆ).

ಆ. ಸಂಶೋಧನ ಕೃತಿಗಳ ಅಧ್ಯಯನ

ಇ. ಆಯಾ ಕ್ಷೇತ್ರದಲ್ಲಿ ಉತ್ತಮವೂ ಪ್ರೌಢವೂ ಶಾಸ್ತ್ರೀಯವೂ ಆದ ಕನಿಷ್ಠ ೧೦ ಪ್ರಧಾನ ಪಠ್ಯಗಳ ಅಧ್ಯಯನ ಮಾಲೆ ಅನಂತರ ಒಂದು ಪಠ್ಯವನ್ನು ಕುರಿತು ಪ್ರಬಂಧ ರಚನೆ ಮಾಡಬೇಕು.

ಈ. ಆಯಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಈಗಾಗಲೇ ಆಗಿರುವ ಅತ್ಯುತ್ತಮವಾದ ಸಂಶೋಧನ ಮಹಾಪ್ರಬಂಧಗಳಲ್ಲಿ ಕನಿಷ್ಠ ಎರಡನ್ನು ಕಡ್ಡಾಯವಾಗಿ ಅಧ್ಯಯನ ಮಾಡಬೇಕು. ಅವುಗಳ ವಿಶಿಷ್ಟತೆಯನ್ನು ಗುರುತಿಸಿ ಎರಡು ಪ್ರಬಂಧಗಳನ್ನು ಬರೆದು ಮಾರ್ಗದರ್ಶಕರಿಗೆ ಒಪ್ಪಿಸಬೇಕು. ಈ ಪ್ರಬಂಧವು ಅಧ್ಯಯನ ಕ್ರಮ, ವಿಮರ್ಶೆ ಮತ್ತು ವರದಿಗಳನ್ನು ಗಮನಿಸಬೇಕು.

ಉ. ಆಯಾ ಕ್ಷೇತ್ರದಲ್ಲಿ ಆಗಬೇಕಾದ ಸಂಶೋಧನೆಗಳನ್ನು ಗುರುತಿಸಿ ವಿದ್ಯಾರ್ಥಿಗಳು ಸ್ವತಂತ್ರವಾಗಿ ಒಂದು ಅಥವಾ ಎರಡು ಪ್ರಬಂಧಗಳನ್ನು ಬರೆಯಬೇಕು.

**೩. ಮುಖ್ಯ ನಿಯಮಗಳು:**

೧. ಸಂಶೋಧನ ವಿಧಾನ ಕುರಿತಂತೆ ನಡೆಯುವ ತರಗತಿಗಳಲ್ಲಿ ಆ ಕುರಿತು ಬೋಧಿಸುವ ಅಧ್ಯಾಪಕರು ಮತ್ತು ಎಲ್ಲ ವಿದ್ಯಾರ್ಥಿಗಳು ಒಟ್ಟಿಗೆ ಇದ್ದು ವಿಷಯ ಮಂಡನೆ ಮತ್ತು ಚರ್ಚೆಯನ್ನು ನಡೆಸಿಕೊಡಬೇಕು.

೨. ಐದನೆಯ ಸೆಮಿಸ್ಟರ್‌ನ ಕೊನೆಯ ಹೊತ್ತಿಗೆಲ್ಲ ವಿದ್ಯಾರ್ಥಿಗಳು ತಂತಮ್ಮ ಸಂಶೋಧನ ವಿಷಯ ಮತ್ತು ಮಾರ್ಗದರ್ಶಕರನ್ನು ಅಂತಿಮಗೊಳಿಸಿಕೊಂಡಿರಬೇಕು. ವಿದ್ಯಾರ್ಥಿಯನ್ನು ಆಯ್ಕೆ ಮಾಡಿಕೊಳ್ಳುವ ಸಂಪೂರ್ಣ ಸ್ವಾತಂತ್ರ್ಯ ಮಾರ್ಗದರ್ಶಕರಿಗೆ ಇರಬೇಕು. ಆಯಾ ವಿಭಾಗದ ಸಮಿತಿ ಈ ಪ್ರಕ್ರಿಯೆಯನ್ನು ಅಂತಿಮಗೊಳಿಸುತ್ತದೆ.

೩. ವಿದ್ಯಾರ್ಥಿಯು ಸಲ್ಲಿಸುವ ವರದಿಯನ್ನು ಇಡೀ ವಿಭಾಗವೇ ಮೌಲ್ಯಮಾಪನ ಮಾಡಬೇಕು.

೪. ಪ್ರತಿಯೊಬ್ಬ ಸಂಶೋಧನ ವಿದ್ಯಾರ್ಥಿಯು ಪ್ರತಿ ತಿಂಗಳೂ ತನ್ನ ಅಧ್ಯಯನ ವರದಿಯನ್ನು ತಪ್ಪದೇ ವಿಭಾಗಕ್ಕೆ ಸಲ್ಲಿಸಬೇಕು.

೫. ಅರ್ಧವಾರ್ಷಿಕ ವರದಿಗಳನ್ನು ಆಯಾ ವಿಭಾಗಗಳು ಅಧ್ಯಯನಾಂಗಕ್ಕೆ ಸಲ್ಲಿಸುವ ಮೊದಲು ಆಯಾ ವಿಭಾಗ ಸಮಿತಿಯ ಮುಂದೆ ಚರ್ಚಿಸಬೇಕು.

೬. ವಿಭಾಗದ ವರದಿಯನ್ನು ಆಧರಿಸಿಯೇ ಆಯಾ ವಿದ್ಯಾರ್ಥಿಗೆ ೬ನೆಯ ಸೆಮಿಸ್ಟರ್‌ಗೆ ಪ್ರವೇಶಾವಕಾಶ ನೀಡಬೇಕು.

**೪. ಆರನೆಯ ಸೆಮಿಸ್ಟರ್ ಅವಧಿಯಲ್ಲಿ ವಿದ್ಯಾರ್ಥಿ ಕೈಗೊಳ್ಳಬೇಕಾದ ಕಾರ್ಯಕ್ರಮಗಳು:**

೧. ವಿದ್ಯಾರ್ಥಿಯು ಆರನೆಯ ಸೆಮಿಸ್ಟರ್‌ಗೆ ಪ್ರವೇಶ ಪಡೆದ ನಂತರ ತನ್ನ ಸಂಶೋಧನ ವಿಷಯಕ್ಕೆ ಸಂಬಂಧಿಸಿದ ಸಾರಲೇಖವನ್ನು ಮಾರ್ಗದರ್ಶಕರಿಗೆ ಸಲ್ಲಿಸಬೇಕು. ಮಾರ್ಗದರ್ಶಕರು ಆ ಸಾರಲೇಖವನ್ನು ವಿಭಾಗದ ಸದಸ್ಯರ ಸಭೆಯಲ್ಲಿ ಇಡಬೇಕು. ಆ ಸಭೆಗೆ ವಿದ್ಯಾರ್ಥಿಯನ್ನು ಆಹ್ವಾನಿಸಿ ಚರ್ಚಿಸಿ ಅಂತಿಮಗೊಳಿಸಬೇಕು. ಅಂತಿಮಗೊಂಡ

ಸಾರಲೇಖವನ್ನು ಅಧ್ಯಯನಾಂಗಕ್ಕೆ ಸಲ್ಲಿಸಿ ನೋಂದಣಿಯನ್ನು ಖಾಯಂ ಆಗಿ ಸ್ಥಿರೀಕರಣಗೊಳಿಸಿಕೊಂಡು ಅನಂತರ ಅಧ್ಯಯನ ಕೈಗೊಳ್ಳಬೇಕು. ವಿದ್ಯಾರ್ಥಿಗೆ ಸಂಶೋಧನ ವಿಷಯ ಬದಲಾವಣೆಗೆ ಒಮ್ಮೆ ಅವಕಾಶವಿರಬೇಕು.

೨. ಆ ನಂತರದಲ್ಲಿ ವಿದ್ಯಾರ್ಥಿಯು ಸಂಬಂಧಿತ ಸಂಶೋಧನ ಕ್ಷೇತ್ರದ ಗ್ರಂಥಸೂಚಿಯೊಂದನ್ನು ಸಿದ್ಧಪಡಿಸಬೇಕು.

೩. ಈ ಅವಧಿಯಲ್ಲಿ ಅಧ್ಯಯನ ಸಮೀಕ್ಷೆ ಮಾಡುವುದರೊಂದಿಗೆ ಎರಡು ಪತ್ರಿಕೆಗಳನ್ನು ಸಿದ್ಧಪಡಿಸಿ ಮಂಡಿಸಬೇಕು.

೪. ಸಂಬಂಧಿತ ವಿಷಯದ ಬಗ್ಗೆ ಬೇರೆ ಬೇರೆ ಕಡೆ ನಡೆಯುವ ಅಧ್ಯಯನ ಗೋಷ್ಠಿಗಳಲ್ಲಿ ಭಾಗವಹಿಸಿ ಆ ಬಗ್ಗೆ ಕನಿಷ್ಠ ಎರಡು ವರದಿಗಳನ್ನು ಆರನೆಯ ಸೆಮಿಸ್ಟರ್ ಮುಗಿಯುವುದರೊಳಗೆ ಸಲ್ಲಿಸಬೇಕು.

೫. ಬೇರೆ ಬೇರೆ ಪತ್ರಿಕೆಗಳಲ್ಲಿ ಆಯಾ ಸಂಶೋಧನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಬರುವ ಪುಸ್ತಕ ವಿಮರ್ಶೆ, ಚರ್ಚೆಗಳನ್ನು ವಿದ್ಯಾರ್ಥಿಯು ಸಂಗ್ರಹಿಸಬೇಕು.

೬. ಈ ಅವಧಿಯ ಮೇಲ್ವಿಚಾರಣೆ ಸಂಪೂರ್ಣವಾಗಿ ಮಾರ್ಗದರ್ಶಕರಿಗೆ ಇರುತ್ತದೆ. ಅವರ ಮೂಲಕ ಮುಖ್ಯಸ್ಥರು ಕಾಲಕಾಲಕ್ಕೆ ವಿದ್ಯಾರ್ಥಿಯ ಅಧ್ಯಯನ ಪ್ರಗತಿಯನ್ನು ಪಡೆದು ಅಧ್ಯಯನಾಂಗಕ್ಕೆ ಕಳುಹಿಸಬೇಕು. ಈ ವರದಿಗಳನ್ನು ಅಂತಿಮವಾಗಿ ಕಳುಹಿಸುವಾಗ ನಿಕಾಯದ ಡೀನ್ ಅವರ ಗಮನಕ್ಕೆ ತರಬೇಕು.

**೫. ಏಳನೆಯ ಮತ್ತು ಎಂಟನೆಯ ಸೆಮಿಸ್ಟರ್ ಅವಧಿ:**

೧. ಏಳನೆಯ ಸೆಮಿಸ್ಟರ್ ಅವಧಿಯಲ್ಲಿ ವಿದ್ಯಾರ್ಥಿಯು ಅಧ್ಯಯನ ಮತ್ತು ಬರವಣಿಗೆಗೆ ಮಾತ್ರ ತನ್ನ ಸಮಯವನ್ನು ಮೀಸಲಿಡಬೇಕು. ಪಿಎಚ್.ಡಿ. ಅಧ್ಯಯನದ ಕರಡನ್ನು ಸಿದ್ಧಪಡಿಸಬೇಕು.

೨. ಎಂಟನೆಯ ಸೆಮಿಸ್ಟರ್ ಅವಧಿಯಲ್ಲಿ ವಿದ್ಯಾರ್ಥಿಯು ಸಂಶೋಧನ ಮಹಾಪ್ರಬಂಧದ ಅಧ್ಯಾಯಗಳನ್ನು ಬರೆದು ಆಯಾ ಅಧ್ಯಾಯಗಳ ಪೂರ್ಣ ಪರಾಮರ್ಶೆ ಮಾಡಬೇಕು. ಅಧ್ಯಾಯಗಳ ಪರಿಶೀಲನೆ ಆಗಬೇಕು.

**೬. ಒಂಬತ್ತು ಮತ್ತು ಹತ್ತನೇ ಸೆಮಿಸ್ಟರ್ ಅವಧಿ:**

೧. ೮ನೇ ಸೆಮಿಸ್ಟರ್ ಮುಗಿದ ಬಳಿಕ ೯ನೇ ಸೆಮಿಸ್ಟರ್‌ನಲ್ಲಿ ವಿದ್ಯಾರ್ಥಿಯು ಮೊದಲ ಕರಡನ್ನು ಪರಿಷ್ಕರಿಸುವುದು ಅಪೇಕ್ಷಣೀಯ. ಅಂದರೆ ಅಧ್ಯಾಯಗಳ ಪುನಃ ಪರಿಷ್ಕಾರ, ತಿದ್ದುಪಡಿಗಳು ಮಾರ್ಗದರ್ಶಕರ ಮೂಲಕ ನಡೆಯುವಂತಿರಬೇಕು.

೨. ೧೦ನೇ ಸೆಮಿಸ್ಟರ್‌ನಲ್ಲಿ ವಿದ್ಯಾರ್ಥಿಯು ಬರವಣಿಗೆಯನ್ನು ಮುಗಿಸಿ ಅಂತಿಮ ಕರಡನ್ನು ವಿಭಾಗದ ಸಮಿತಿಯ ಮುಂದೆ ಮಂಡಿಸಬೇಕು. ನಂತರ ಸಾರಲೇಖವನ್ನು ವಿಭಾಗದ ಮೂಲಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು. (ಈ ಅವಧಿಯಲ್ಲಿ ಅವಶ್ಯವಿದ್ದಲ್ಲಿ ವಿದ್ಯಾರ್ಥಿಯು ಮಾರ್ಗದರ್ಶಕರ ಶಿಫಾರಸ್ಸಿನ ಮೂಲಕ ವಿಸ್ತರಣೆಯನ್ನು ನಿಬಂಧನೆಗೊಳಪಟ್ಟು ಕೋರಬಹುದು)

೩. ಯಾವುದೇ ಕಾರಣಕ್ಕೂ ಅಂಶಿಕ ಅವಶ್ಯಕತೆಗಾಗಿ ಸಲ್ಲಿಸುವ ಡೆಸೆರ್ಟೇಶನ್ನು ಪಿಎಚ್.ಡಿ.ಯ ಪದವಿಗೆ ಸಲ್ಲಿಸಕೂಡದು. ಪೂರ್ಣ ಪ್ರಮಾಣದ ನಿಬಂಧವನ್ನೇ ಪಿಎಚ್.ಡಿ. ಪದವಿಗೆ ಸಲ್ಲಿಸಲು ಸ್ಪಷ್ಟ ಸೂಚನೆಗಳಿರಬೇಕು.

೪. ಈ ನಿಗದಿತ ವಿಸ್ತರಣ ಅವಧಿಯು ಮುಗಿದ ಮೇಲೆ ವಿಶೇಷ ವಿಸ್ತರಣೆ ಅವಧಿಗೆ ಅವಕಾಶವಿರುತ್ತದೆ. ಅದು ಮಾರ್ಗದರ್ಶಕರು ಮತ್ತು ವಿಭಾಗದ ಇತರೆ ಸದಸ್ಯರು, ಅಧ್ಯಯನಾಂಗದ ನಿರ್ದೇಶಕರು ಮತ್ತು ಮಾನ್ಯ ಕುಲಪತಿಗಳ ನಿರ್ಧಾರದ ಮೇಲೆ ಜಾರಿಗೆ ಬರುವಂಥದ್ದು.

**೭. ಎಂ.ಎ.ಪಿಎಚ್.ಡಿ. ಶಿಕ್ಷಣದ ಪಿಎಚ್.ಡಿ. ನೋಂದಣಿಯನ್ನು ಬಾಹ್ಯ ಪಿಎಚ್.ಡಿ.ಯಾಗಿ ಪರಿವರ್ತಿಸುವ ಕ್ರಮ:**

೧. ಎಂ.ಎ.ಪಿಎಚ್.ಡಿ.ಯಡಿಯಲ್ಲಿ ಪಿಎಚ್.ಡಿ. ನೋಂದಣಿ ಪಡೆದ ವಿದ್ಯಾರ್ಥಿಗಳು ಬಾಹ್ಯ ಪಿಎಚ್.ಡಿಗೆ ಬದಲಾವಣೆ ಬಯಸುವವರು ತಮಗೆ ಸಂಬಂಧಿಸಿದ ವಿಭಾಗದ ಮೂಲಕ ಮಾರ್ಗದರ್ಶಕರ ಅನುಮೋದನೆಯೊಂದಿಗೆ ಅಧ್ಯಯನಾಂಗಕ್ಕೆ ಅರ್ಜಿ ಸಲ್ಲಿಸಬೇಕು.

೨. ಎಂ.ಎ.ಪಿಎಚ್.ಡಿ ಅಡಿಯಲ್ಲಿ ಪಡೆದ ನೋಂದಣಿಯ ದಿನಾಂಕವನ್ನೇ ಬಾಹ್ಯ ಪಿಎಚ್.ಡಿಗೆ ಪರಿವರ್ತಿಸುವಾಗ ನೋಂದಣಿ ದಿನಾಂಕವನ್ನಾಗಿ ಪರಿಗಣಿಸಬೇಕು.

೩. ಎಂ.ಎ.ಪಿಎಚ್.ಡಿಯ ನೋಂದಣಿಯಾದ ಬಾಹ್ಯ ಪಿಎಚ್.ಡಿ ನೋಂದಣಿಯಾಗಿ ಪರಿವರ್ತಿಸಿದ ದಿನಾಂಕದಿಂದ ಪ್ರತಿ ಆರು ತಿಂಗಳಿಗೊಮ್ಮೆ ಪ್ರಗತಿ ವರದಿಯನ್ನು ಮಾರ್ಗದರ್ಶಕರಿಗೆ ಸಲ್ಲಿಸಬೇಕು ಮತ್ತು ಪ್ರತಿ ಆರು ತಿಂಗಳಿಗೊಮ್ಮೆ ಶುಲ್ಕ ರೂ. ೧೫೦೦ ಕಟ್ಟಬೇಕು. (ಪ.ಜಾ/ಪ.ಪಂ/ಪ್ರವರ್ಗ–೧ ಇವರಿಗೆ ಶುಲ್ಕ ಶೇ. ೪೦ ರಿಯಾಯಿತಿ ಇದೆ)

೪. ಎಂ.ಎ.ಪಿಎಚ್.ಡಿ ವಿದ್ಯಾರ್ಥಿ ಮೂಲದಲ್ಲಿ ಪಡೆದ ನೋಂದಣಿ ದಿನಾಂಕದಿಂದ ಮೂರು ವರ್ಷಗಳ ಕಾಲ ಅಧ್ಯಯನ ಅವಧಿ ಇರುತ್ತದೆ. ನೋಂದಣಿ ಪಡೆದ ಎರಡು ವರ್ಷಗಳ ನಂತರ ಮಹಾಪ್ರಬಂಧ ಸಲ್ಲಿಸಬಹುದು. ಮೂರು ವರ್ಷದ ನಂತರ ಮಾನ್ಯ ಕುಲಪತಿ ಅವರ ಅನುಮೋದನೆಯೊಂದಿಗೆ ಒಂದು ವರ್ಷ ವಿಸ್ತರಣೆ ಪಡೆದುಕೊಳ್ಳಬಹುದು.

೫. ಪರೀಕ್ಷಾ ಮೌಲ್ಯಮಾಪನ ಹಾಗೂ ಉಳಿದ ನಿಯಮಗಳು ಬಾಹ್ಯ ಪಿಎಚ್.ಡಿ.ಯಲ್ಲಿರುವಂತೆ ಇರುತ್ತವೆ.